ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMIOEST(4)/14/2021 | 526

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 01.08.2022

**ಅಧಿಕೃತ ಜ್ಞಾಪನ**

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯ ಕಾರ್ಯಾಗಾರ ವಿಭಾಗದಲ್ಲಿನ ಸಹ ಶಿಕ್ಷಕರು(ಸಹ ಬೋಧಕ)ಗಳಿಗೆ ಶಿಕ್ಷಕರು(ಬೋಧಕ)(ಉಳಿದ ಮೂಲ ವೃಂದದ) ಹುದ್ದೆಗೆ ನೀಡಿರುವ ಸ್ಥಾನಪನ್ನ ಬಡ್ತಿಯನ್ನು ಹಿಂಪಡೆಯುವ ಕುರಿತು.

**ಉಲ್ಲೇಖ:** 1. ತಾಂತ್ರಿಕ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ:DTE-ADMIOEST(4)14/2021, ದಿ: 03.06.2022.
2. ಸಹ ಶಿಕ್ಷಕರುಗಳ ಮನವಿ.
3. ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಾವಳಿ, 1977 ರ ನಿಯಮ.

*****

ಉಲ್ಲೇಖ(1) ರ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಕಾರ್ಯಾಗಾರ ವಿಭಾಗದಲ್ಲಿನ ಸಹ ಶಿಕ್ಷಕರ(ಸಹ ಬೋಧಕ) (ಉಳಿದ ಮೂಲ ವೃಂದದ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅರ್ಹ ಸಿಬ್ಬಂದಿಗಳಿಗೆ ಖಾಲಿಯಿರುವ ಗ್ರೂಪ್-ಸಿ ವೃಂದದ ವೇತನ ಶ್ರೇಣಿ ರೂ. 33450-62600 ರಲ್ಲಿನ ಶಿಕ್ಷಕರ(ಬೋಧಕ)(ಉಳಿದ ಮೂಲ ವೃಂದದ) ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಲಾಗಿತ್ತು. ಉಲ್ಲೇಖ(2) ರಂತೆ ಕೆಳಕಂಡ ಶಿಕ್ಷಕರುಗಳು ವೈದ್ಯಕೀಯ ಕಾರಣ, ವೈಯಕ್ತಿಕ ಕಾರಣ, ಒಂದು ವರ್ಷ ಕಾಲಾವಕಾಶ ಹಾಗೂ ಸ್ಥಳ ಮಾರ್ಪಾಡು ಕೋರಿ ಮುಂಬಡ್ತಿ ಹುದ್ದೆಯಲ್ಲಿ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ. ಸದರಿಯವರುಗಳಿಗೆ ಮುಂಬಡ್ತಿ ನೀಡಿರುವ ಆದೇಶದಲ್ಲಿ, ಸ್ಥಳನಿಯುಕ್ತಿಗೊಳಿಸಲಾದ ಸಂಸ್ಥೆಯಲ್ಲಿ 15 ದಿನಗಳೊಳಗಾಗಿ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಬಡ್ತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ ಎಂದು ತಿಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ(1) ರಲ್ಲಿ ಕೆಳಕಂಡ ಸಹ ಶಿಕ್ಷಕರುಗಳಿಗೆ ಸಹ ಶಿಕ್ಷಕರ ವೃಂದದಿಂದ ಶಿಕ್ಷಕರ ಹುದ್ದೆಗೆ ನೀಡಿರುವ ಸ್ಥಾನಪನ್ನ ಬಡ್ತಿಯನ್ನು ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಾವಳಿ, 1977 ರ ನಿಯಮ 4(ಎ) ರಂತೆ ಹಿಂಪಡೆಯಲಾಗಿದೆ.

| ಕ್ರ. ಸಂ. | ಮುಂಬಡ್ತಿ ಆದೇಶದ ಕ್ರಮಾಂಕ | ಸಹ ಶಿಕ್ಷಕರ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಯ ಹೆಸರು | ಶಿಕ್ಷಕರ ಹುದ್ದೆಗೆ ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಿದ್ದ ಸಂಸ್ಥೆ |
|---|---|---|---|
| | | ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ | |
| 1. | 5 | ಅಜಯ್ ಎಂ. ನಾತು<br>ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ | ಸರ್ಕಾರಿ ಪಾಲಿಟೆಕ್ನಿಕ್, ಮುಂಡಗೋಡ |
| 2. | 9 | ಅನಿಲ್‌ಕುಮಾರ್ ಎನ್.<br>ಸರ್ಕಾರಿ ಪಾಲಿಟೆಕ್ನಿಕ್, ಚನ್ನಸಂದ್ರ | ಸರ್ಕಾರಿ ಪಾಲಿಟೆಕ್ನಿಕ್, ಮುಳಬಾಗಿಲು |
| 3. | 16 | ಜೈಪ್ರಕಾಶ್ ಎಂ.ಎಸ್.,<br>ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ | ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ |
| 4. | 17 | ಹೆಚ್.ಕೆ. ವೆಂಕಟೇಶ್,<br>ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ |

"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"

1/8/22

ಜಂಟಿ ನಿರ್ದೇಶಕರು(ಆಡಳಿತ),
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಇವರಿಗೆ:-

1. ತಾಂತ್ರಿಕ ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ;
2. ಸಂಬಂಧಪಟ್ಟ ಸಹ ಶಿಕ್ಷಕರಿಗೆ(ಸಂಬಂಧಿಸಿದ ಪ್ರಾಂಶುಪಾಲರ ಮುಖಾಂತರ);

...2/-

3. ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ;
4. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು).

ಪ್ರತಿ:-

1. ಆಪ್ತಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ಶಾಖಾ ರಕ್ಷಾ ಕಡತ.